**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**

**ಕ್ರಿಮೀನಲ್ ಮೊಕದ್ದಮೆ ನಂ. 27/2018.**

**ಚಾಸಾ-05**

**ಪ್ರಾಸಾ-04**

**ದಿನಾಂಕಃ 12-01-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಪ್ರಶಾಂತ ತಂಃಶ್ರಿಕಾಂತ ಕ್ಷಿರಸಾಗರ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಗಸ್ತು ವನಪಾಲಕ, ಜಗಲಪೇಟ ವಲಯ |
| ವಾಸ | ಃ ಜಗಲಪೇಟ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು ಡಿಸೆಂಬರ್-2012 ರಿಂದ ಅಗಸ್ಟ್-2017 ರ ವರೆಗೆ ದಾಂಡೇಲಿ ವಲಯದ ಕರೆಂಪಲ್ಲಿ ಗಸ್ತಿನಲ್ಲಿ ಗಸ್ತು ವನಪಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 20-03-2014 ರಂದು ಸಂಜೆ ಸುಮಾರು 06-00 ಗಂಟೆ ಸಮಯದಲ್ಲಿ ಕೆರವಾಡ ಗ್ರಾಮದಲ್ಲಿ ಗುಂಡು ಕಲ್ಲಪ್ಪ ಗೊಂಡಾಳಕ ರವರಿಗೆ ಸೇರಿದ ದನದ ಕೊಟ್ಟಿಗೆಯಲ್ಲಿ ಮಾಲು ಇದೆ ಎಂದು ಬಂದ ಬಾತ್ಮಿ ಮೇರೆಗೆ, ಚಾಸಾ-1 ರವರು ಸದರಿ ವಿಷಯವನ್ನು ಚಾಸಾ-6 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿ, ನನ್ನನ್ನು ಮತ್ತು ಚಾಸಾ-4 ರವರನ್ನು ಕರೆದುಕೊಂಡು, ಕೆರವಾಡ ಗ್ರಾಮಕ್ಕೆ ಸಂಜೆ 06-30 ಕ್ಕೆ ತಲುಪಿದೆವು. ಅಲ್ಲಿ ಎರಡು ಜನ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು, ಅವರಿಗೆ ಮಾಹಿತಿಯನ್ನು ತಿಳಿಸಿ, ಪಂಚರಾಗಿ ಸಹಕರಿಸಲು ಕೋರಿದೆ. ಅವರನ್ನೂ ಸಹ ನಮ್ಮ ಜೊತೆ ಕರೆದುಕೊಂಡು ಗುಂಡು ಕಲ್ಲಪ್ಪ ಗೊಂಡಾಳಕರವರ ಮನೆಗೆ ಹೋದೆವು.

3. ನಂತರ ಮನೆಯಲ್ಲಿದ್ದ ಎಲ್ಲಾ ಹೆಣ್ಣು ಮಕ್ಕಳಿಗೆ ಹೊರಬರಲು ಹೇಳಿದೇನು ಮತ್ತು ಹೊರಗೆ ಬಂದ ನಂತರ ಬಾತ್ಮಿ ವಿಚಾರವನ್ನು ತಿಳಿಸಿ, ಮನೆಯನ್ನು ಶೋಧಿಸುವ ಅವಶ್ಯಕತೆಯನ್ನು ತಿಳಿಸಿದೆವು. ಅದರಂತೆ ಮನೆಯ ಪಕ್ಕದಲ್ಲಿರುವ ಕೊಟ್ಟಿಗೆಗೆ ಹೋದಾಗ, ಅಲ್ಲಿ ಹುಲ್ಲಿನ

ಕೆಳಗೆ 4 ಸಿಸಂನ ಹಲಗೆಗಳು ಮತ್ತು ಒಂದು ಸಾಗುವಾನಿ ಮರದ ಚೌಕ ನಗ, 5 ಅಡಿಯ ಒಂದು ಗರಗಸ ಮತ್ತು ಒಂದ ಬಾಚಿ ಇದ್ದವು. ಅದೇ ರೀತಿ ಅಲ್ಲೆ ಪಕ್ಕದಲ್ಲಿದ್ದ ಇನ್ನೊಂದು ಕೋಣೆಯನ್ನು ಶೋಧಿಸಿದಾಗ, ಅಲ್ಲಿಯೂ  ಒಂದು ಸಾಗುವಾನಿ ಮರದ ಚೌಕ ನಗ ಸಿಕ್ಕಿತು.

4. ನಂತರ ಎಲ್ಲಾ ಸ್ಥಳವನ್ನು ಪರಿಶೀಲನೆ ಮಾಡಿರುತ್ತೇವೆ, ಬೇರೆ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಆಗ ಮನೆಯ ಮಾಲೀಕನಾದ ಆರೋಪಿಯನ್ನು ಚಾಸಾ-1 ರವರು ಸದರಿ ಕಟ್ಟಿಗೆಗಳನ್ನು ಹೊಂದಲು ಅನುಮತಿ ಅಥವಾ ಪರವಾನಗಿ ಇರುವ ಬಗ್ಗೆ ವಿಚಾರಿಸಿದಾಗ, ತನ್ನ ಹತ್ತಿರ ಯಾವುದೇ ಅನುಮತಿ ಅಥವಾ ಪರವಾನಗಿ ಇರುವುದಿಲ್ಲ ಮತ್ತು ತಾನು ಸದರಿ ಕಟ್ಟಿಗೆಗಳನ್ನು ಪಕ್ಕದ ಕಾಡಿನಿಂದ ಕಡಿದುಕೊಂಡು ಬಂದಿರುವುದಾಗಿ ತಿಳಿಸಿರುತ್ತಾನೆ.

5. ನಂತರ ಸದರಿ ಎಲ್ಲಾ ವಸ್ತುಗಳನ್ನು ಕೊಟ್ಟೆಗೆಯ ಮುಂದೆ ಮನೆಯ ಮುಂದೆ ತಂದು ಇಟ್ಟು, ಅವುಗಳನ್ನು ಅಳತೆ ಮಾಡಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಆರೋಪಿಯ ವಿರುದ್ಧ ಪ್ರ.ವ.ವರದಿಯನ್ನು ದಾಖಲಿಸಿ, ಎಲ್ಲಾ ವಸ್ತುಗಳನ್ನು ಜಪ್ತು ಮಾಡಿ, ಮುಂದಿನ ಕ್ರಮಕ್ಕಾಗಿ ವಲಯ ಕಚೇರಿಗೆ ತೆಗೆದುಕೊಂಡು ಬಂದಿರುತ್ತೇವೆ ಮತ್ತು ಅದೇ ಸಮಯಲ್ಲಿ ಆರೋಪಿಯನ್ನು ಸಹ ಕರೆದುಕೊಂಡು ಕಚೇರಿಗೆ ಹೋಗಿರುತ್ತೇವೆ. ನಂತರ ಆರೋಪಿಯನ್ನು ಮತ್ತು ಜಪ್ತಾದ ವಸ್ತುಗಳನ್ನು, ವಲಯ ಕಚೇರಿಗೆ ತೆಗೆದುಕೊಂಡು ಹೋಗಿ, ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿರುವ ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಹೆಚ್ ವಕೀಲರಿದ**

6. ನಾನು ಕರೆಂಪಲ್ಲಿ ಬೀಟ್ ನಲ್ಲಿ ಗಸ್ತಿಲ್ಲಿದ್ದಾಗ ಸಂಜೆ 06-00 ಗಂಟೆಗೆ ಚಾಸಾ-4 ರವರು ಸದರಿ ಮಾಹಿತಿಯನ್ನು ಹೇಳಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಸಂಜೆ 06-30 ಗಂಟೆ ಆಗಿತ್ತು. ಕರೆಂಪಲ್ಲಿಯಿಂದ ಘಟನಾ ಸ್ಥಳ ಅಂದಾಜು 4-5 ಕಿ.ಮೀ ಅಂತರದಲ್ಲಿರುತ್ತದೆ.

7. ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಚಾಸಾ-1, 4 ಮತ್ತು ಪಂಚರು ಅಲ್ಲಿಗೆ ಬಂದಿದ್ದರು. ನಾವು ಪರೀಕ್ಷೆ ಮಾಡಿದ ಮನೆ 2 ಕೋಣೆಗಳನ್ನು ಹೊಂದಿತ್ತು. ಮನೆಯ ಪಕ್ಕದಲ್ಲಿರುವ ಇನ್ನೊಂದು ಕೋಣೆಯಲ್ಲಿ ನಮಗೆ ಆ ದಿನ ಸಾಗುವಾನಿ ನಗ ಸಿಕ್ಕಿರುತ್ತದೆ. ಮನೆ ನಂಬರ್ ನನಗೆ ಹೇಳಲು ಬರುವುದಿಲ್ಲ. ನಾನಾಗಲೀ ಅಥವಾ ನನ್ನ ಇಲಾಖೆಯ ಇತರೇ ಸಿಬ್ಬಂದಿಗಳು ಸಾಗುವಾನಿ ನಗ ಸಿಕ್ಕ ಸ್ಥಳದ ಫೋಟೋವನ್ನು ತೆಗೆದಿಲ್ಲ.

8. ಕೊಟ್ಟಿಗೆಯ ಯಾವ ಭಾಗದಲ್ಲಿ ನಗ ಸಿಕ್ಕಿತು ಎಂದು ನನಗೆ ಗೊತ್ತಿಲ್ಲ. ನಾನಾಗಲೀ ಅಥವಾ ನನ್ನ ಇಲಾಖೆಯ ಇತರೇ ಸಿಬ್ಬಂದಿಗಳು ಸಾಗುವಾನಿ ನಗ ಸಿಕ್ಕ ಸ್ಥಳದ ಫೋಟೋವನ್ನು ತೆಗೆದಿಲ್ಲ. ಪಂಚನಾಮೆಯನ್ನು ವಸ್ತುಗಳು ಸಿಕ್ಕ ಸ್ಥಳದಲ್ಲಿಯೇ ಮಾಡಿರುತ್ತೇವೆ. ಪಂಚನಾಮೆಯನ್ನು ಚಾಸಾ-1 ರವರು ಬರೆದಿರುತ್ತಾರೆ. ಪಂಚನಾಮೆಯನ್ನು ಬರೆಯಲು ಮೇಲಾಧಿಕಾರಿಗಳಾದ ಚಾಸಾ-4 ರವರು ಹೇಳಿರುತ್ತಾರೆ.

9. ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಯೇ ಇಲ್ಲ, ಅಲ್ಲಿ ಯಾವುದೇ ವಸ್ತುಗಳು ಸಿಕಿಲ್ಲ ಮತ್ತು ನಾವು ಆ ಸ್ಥಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸ್ಥಳದಿಂದ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲೋ ಸಿಕ್ಕ ವಸ್ತುಗಳನ್ನು ಬಳಸಿಕೊಂಡು, ಈ ಸುಳ್ಳು ಪ್ರಕರಣಕ್ಕೆ ಅಳವಡಿಸಿ, ಪಂಚನಾಮೆಯನ್ನು ನಮ್ಮ ಕಚೇರಿಯಲ್ಲಿಯೇ ತಯಾರಿಸಿ, ಅದಕ್ಕೆ ಪೂರಕವಾಗಿ ನಾನು ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಿಪಿ-2 ಫೋಟೋವನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ನ್ನು ಘಟನಾ ಸ್ಥಳದಲ್ಲಿ ತೆಗೆದಿಲ್ಲ, ಅದನ್ನು ನಮ್ಮ ವಲಯ ಕಚೇರಿಯಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ
ಸಹಿ ಇದೆ/-
(ತೇಜಸ್ವಿನಿ ಸೊಗಲದ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.